# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮುಕ್ತಗಂಗೋತ್ರಿ, ಮೈಸೂರು – ೫೭೦ ೦೦೬

'ವಿಶ್ವವಿದ್ಯಾನಿಲಯದ 25ನೇ ವರ್ಷದ ಬೆಳ್ಳಿ ಹಬ್ಬದ ವರ್ಷಾಚರಣೆ' ಜೂನ್ – 2021 ರಿಂದ ಜೂನ್ – 2022 ರವರೆಗೆ

'ಕನ್ನಡ ಕಾಯಕ ವರ್ಷಾಚರಣೆ' ೧ನೇ ನವೆಂಬರ್ ೨೦೨೦ ರಿಂದ ೩೧ನೇ ಅಕ್ಟೋಬರ್ ೨೦೨೧ ರವರೆಗೆ

---

ದಿನಾಂಕ: **14-09-2021** ರಂದು ಮಧ್ಯಾಹ್ನ **4:00** ಗಂಟೆಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಮಾನ್ಯ ಕುಲಪತಿಗಳ ಕಚೇರಿ ಸಭಾಂಗಣದಲ್ಲಿ ನಡೆದ 19ನೇ ವಿಶೇಷ ಶೈಕ್ಷಣಿಕ ಮಂಡಳಿ ಸಭೆಯ ನಡಾವಳಿ.

| **ಉಪಸ್ಥಿತರು** | |
|---|---|
| **ಪ್ರೊ. ಎಸ್. ವಿದ್ಯಾಶಂಕರ್**<br>ಮಾನ್ಯ ಕುಲಪತಿಗಳು ಹಾಗು ಅಧ್ಯಕ್ಷರು<br>ಶೈಕ್ಷಣಿಕ ಮಂಡಳಿ,<br>ಕರಾಮುವಿ, ಮೈಸೂರು. | **ಪ್ರೊ. ರಾಜಣ್ಣ .ಆರ್.**<br>ಕುಲಸಚಿವರು ಮತ್ತು ಸದಸ್ಯ ಕಾರ್ಯದರ್ಶಿಗಳು<br>ಶೈಕ್ಷಣಿಕ ಮಂಡಳಿ,<br>ಕರಾಮುವಿ, ಮೈಸೂರು. |
| **ಪ್ರೊ. ಕಾಂಬ್ಳೆ ಅಶೋಕ್**<br>ಡೀನ್ (ಶೈಕ್ಷಣಿಕ)<br>ಸದಸ್ಯರು ಶೈಕ್ಷಣಿಕ ಮಂಡಳಿ,<br>ಕರಾಮುವಿ, ಮೈಸೂರು. | **ಡಾ. ಷಣ್ಮುಖ**<br>ಡೀನ್ (ಅಧ್ಯಯನ ಕೇಂದ್ರಗಳು),<br>ಸದಸ್ಯರು ಶೈಕ್ಷಣಿಕ ಮಂಡಳಿ,<br>ಕರಾಮುವಿ, ಮೈಸೂರು. |
| **ಡಾ. ಮಹಾದೇವನ್ .ಕೆ.ಎಂ.**<br>ಕುಲಸಚಿವ (ಪರೀಕ್ಷಾಂಗ) ಹಾಗು ಸದಸ್ಯರು<br>ಶೈಕ್ಷಣಿಕ ಮಂಡಳಿ,<br>ಕರಾಮುವಿ, ಮೈಸೂರು. | **ಡಾ. ಲಕ್ಷ್ಮಿ .ಎನ್.**<br>ಮುಖ್ಯಸ್ಥರು, ಶಿಕ್ಷಣಶಾಸ್ತ್ರ ಅಧ್ಯಯನ ಹಾಗು<br>ಸಂಶೋಧನಾ ವಿಭಾಗ<br>ಸದಸ್ಯರು ಶೈಕ್ಷಣಿಕ ಮಂಡಳಿ,<br>ಕರಾಮುವಿ, ಮೈಸೂರು. |
| **ವಿಶೇಷ ಆಹ್ವಾನಿತರು** | |
| **ಡಾ. ನಿರಂಜನ್ ರಾಜ್**<br>CIQA ನಿರ್ದೇಶಕರು<br>ಕರಾಮುವಿ, ಮೈಸೂರು. | **ಡಾ. ಹೆಚ್. ರಾಜೇಶ್ವರಿ**<br>ವಿಶೇಷಾಧಿಕಾರಿ – ಡೀನ್ (ಶೈಕ್ಷಣಿಕ)<br>ಕರಾಮುವಿ, ಮೈಸೂರು. |
| **ಸಭೆಗೆ ಗೈರುಹಾಜರಾದ ಸದಸ್ಯರು** | |
| **ಡಾ. ಎ. ಖಾದರ್ ಪಾಷಾ**<br>ಹಣಕಾಸು ಅಧಿಕಾರಿಗಳು ಹಾಗು ಸದಸ್ಯರು<br>ಶೈಕ್ಷಣಿಕ ಮಂಡಳಿ,<br>ಕರಾಮುವಿ, ಮೈಸೂರು. | |

ಸಭೆಗೆ ಹಾಜರಾಗಿದ್ದ ಸದಸ್ಯರುಗಳನ್ನು ಮಾನ್ಯ ಕುಲಪತಿಗಳು ಸ್ವಾಗತಿಸುವುದರೊಂದಿಗೆ ಸಭೆಯು ಪ್ರಾರಂಭವಾಯಿತು. ಮುಂದುವರೆದು ಮಾನ್ಯ ಕುಲಪತಿಗಳು ಮಾತನಾಡುತ್ತಾ, 19ನೇ ವಿಶೇಷ ಶೈಕ್ಷಣಿಕ ಮಂಡಳಿ ಸಭೆಯ ಕಾರ್ಯಸೂಚಿಯನ್ನು ಸಭೆಯಲ್ಲಿ ಮಂಡಿಸಲು ಡೀನ್ (ಶೈಕ್ಷಣಿಕ) ಅವರಿಗೆ ಸೂಚಿಸಿದರು.

ಕುಲಸಚಿವರು　　　　　　　　　　ಕುಲಪತಿಗಳು

## ವಿಷಯ ಸಂಖ್ಯೆ: 19.01

**ವಿಷಯ** : Ordinance related to Diploma Programmes 2017 ಅನ್ನು ಪರಿಷ್ಕರಿಸಿರುವ ಬಗ್ಗೆ.

****

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ Ordinance relating to Diploma Programmes 2017 ಅನ್ನು ಸಿದ್ಧಪಡಿಸಿ ಸರ್ಕಾರದ ಮುಖಾಂತರ ಕುಲಾಧಿಪತಿಗಳ ಅಂಕಿತಕ್ಕಾಗಿ ಕಳುಹಿಸಿಕೊಡಲಾಗಿತ್ತು. ಸದರಿ ಅಧ್ಯಾದೇಶವು ಕುಲಾಧಿಪತಿಗಳಿಂದ ಅನುಮೋದನೆಗೊಂಡಿರುತ್ತದೆ. (ಸರ್ಕಾರದ ಪತ್ರ ಸಂಖ್ಯೆ ಇಡಿ 32 ಯುಓವಿ 2018 ದಿನಾಂಕ: 29.06.2019)

ದಿನಾಂಕ: 19–07–2021 ರಂದು CIQA ನಿರ್ದೇಶಕರ ಅಧ್ಯಕ್ಷತೆಯಲ್ಲಿ ನಡೆದ ವಿವಿಧ ಅಧ್ಯಯನ ವಿಭಾಗಗಳ ಮುಖ್ಯಸ್ಥರುಗಳ ಸಭೆಯಲ್ಲಿ ಸದರಿ ಅಧ್ಯಾದೇಶದಲ್ಲಿ ಕೆಲವೊಂದು ಮಾರ್ಪಾಡುಗಳನ್ನು ಸೂಚಿಸಲಾಗಿತ್ತು.

ಸದರಿ ಅಧ್ಯಾದೇಶದಲ್ಲಿ ತಿದ್ದುಪಡಿ ಮಾಡಲು ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಸಮಿತಿ (ಕರಾಮುವಿ/ಡೀನ್(ಶೈ)–07/2021–22,ದಿನಾಂಕ:08–09–2021) ರಂದು ರಚಿಸಿದ್ದು, ಸದರಿ ಸಮಿತಿಯು ದಿನಾಂಕ: 13–09–2021 ರಂದು ಸಭೆ ನಡೆಸಿ, ಪರಿಷ್ಕರಿಸಿ ಹೊಸದಾಗಿ Ordinance relating to Diploma Programmes 2017 (I Ammendment -2021 ) ರ ಕರಡನ್ನು ಸಿದ್ಧಪಡಿಸಿ ನಡಾವಳಿಯೊಂದಿಗೆ ಸಲ್ಲಿಸಿರುತ್ತಾರೆ.

ಪ್ರಸ್ತುತ, ಹೊಸದಾಗಿ ಪರಿಷ್ಕರಿಸಿ ಸಿದ್ಧಪಡಿಸಿ ಸಲ್ಲಿಕೆಯಾಗಿರುವ Ordinance relating to Diploma Programmes 2017 (I Ammendment -2021 ) ರ ಕರಡನ್ನು ಶೈಕ್ಷಣಿಕ ಮಂಡಳಿ ಸಭೆಯ ಚರ್ಚೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

<u>ತೀರ್ಮಾನ</u> :

**ಹೊಸದಾಗಿ ಪರಿಷ್ಕರಿಸಿ ತಿದ್ದುಪಡಿಯೊಂದಿಗೆ ರಚಿಸಲಾಗಿರುವ Ordinance relating to Diploma Programmes 2017 (I Ammendment - 2021) ಅನ್ನು ಯಥಾವತ್ತಾಗಿ ಅನುಮೋದಿಸಲಾಯಿತು.**

ಕುಲಸಚಿವರು                ಕುಲಪತಿಗಳು

## ವಿಷಯ ಸಂಖ್ಯೆ: 19.02

ವಿಷಯ : 2014–15 ರಲ್ಲಿ ಚಾಲ್ತಿಯಲ್ಲಿದ್ದ M.Sc Tech in Environmental Science and Technology ಕಾರ್ಯಕ್ರಮದ ಶೀರ್ಷಿಕೆಯನ್ನು M.Sc in Environmental Science ಎಂದು ಬದಲಾಯಿಸುವ ಬಗ್ಗೆ

******

ಪರಿಸರ ವಿಜ್ಞಾನ ಅಧ್ಯಯನ ಮತ್ತು ಸಂಶೋಧನಾ ವಿಭಾಗದಿಂದ 2011 ರಿಂದ M.Sc Tech in Environmental Science and Technology ಆರಂಭಿಸಲಾಗಿತ್ತು. 2015ರಲ್ಲಿ ಮಾನ್ಯತೆ ರದ್ದಾದ ಕಾರಣ 2014–15 ನೇ ಸಾಲಿನ ವಿದ್ಯಾರ್ಥಿಗಳಿಗೆ ಪದವಿ ಪ್ರಮಾಣ ಪತ್ರ ನೀಡಿರುವುದಿಲ್ಲ. 2018–19 ರಲ್ಲಿ ಯುಜಿಸಿ ನಿಯಮಗಳ ಅನುಸಾರ M.Sc in Environmental Science ಕಾರ್ಯಕ್ರಮ ಎಂದು ಪಿಪಿಆರ್ ಸಲ್ಲಿಸಿ ಯುಜಿಸಿಯಿಂದ ಅನುಮೋದನೆ ಪಡೆದು ಸದರಿ ಕಾರ್ಯಕ್ರಮವನ್ನು ಪುನಃ ಆರಂಭಿಸಲಾಗಿದೆ. 2014–15 ರಲ್ಲಿ M.Sc Tech in Environmental Science and Technology ಕಾರ್ಯಕ್ರಮಕ್ಕೆ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳಿಗೆ ಪ್ರಸ್ತುತ ಪದವಿ ನೀಡಬೇಕಾಗಿದ್ದು ಇವರಿಗೆ M.Sc in Environmental Science ಎಂದು ಪದವಿ ನೀಡಬಹುದೆಂದು ದಿನಾಂಕ: 30–07–2021 ರಲ್ಲಿ ನಡೆದ ಪರಿಸರ ವಿಜ್ಞಾನ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಪಿಜಿ ಅಧ್ಯಯನ ಮಂಡಳಿಯು ಶಿಫಾರಸ್ಸು ಮಾಡಿರುತ್ತದೆ.

ಸದರಿ ಅಧ್ಯಯನ ಮಂಡಳಿಸಭೆ ನಡೆಸಿ ಸಲ್ಲಿಸಲಾಗಿರುವ ಸಭೆಯ ನಡಾವಳಿ ಬಗ್ಗೆ ಶೈಕ್ಷಣಿಕ ಮಂಡಳಿ ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ವಿಷಯ ಮಂಡಿಸಿದೆ.

ಚರ್ಚೆ :

**ಯುಜಿಸಿಯು ಹೊರಡಿಸಿರುವ ಪದವಿ ಪಟ್ಟಿಯಲ್ಲಿ M.Sc Tech in Environmental Science and Technology ಪದವಿ ಶೀರ್ಷಿಕೆಯಿಲ್ಲದಿರುವುದನ್ನು ಸಭೆಯು ಗಮನಿಸಿತು.**

ತೀರ್ಮಾನ :

**2014–15 ರಲ್ಲಿ M.Sc Tech in Environmental Science and Technology ಕಾರ್ಯಕ್ರಮಕ್ಕೆ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳಿಗೆ M.Sc in Environment Science ಎಂದು ಪದವಿ ನೀಡಲು ಅನುಮೋದನೆ ನೀಡಲಾಯಿತು.**

**ಮುಂದುವರೆದು, 2014–15 ರಲ್ಲಿ M.Sc Tech in Environmental Science and Technology ಸ್ನಾತಕೋತ್ತರ ಪದವಿಗೆ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳಿಗೆ ಈಗಾಗಲೇ ವಿತರಿಸಿರುವ ಅಂಕ ಪಟ್ಟಿಗಳನ್ನು ಹಿಂಪಡೆದು, ಆ ಸಾಲಿನಿಂದಲೇ ಅನ್ವಯವಾಗುವಂತೆ ಹೊಸದಾಗಿ M.Sc in Environmental Science ಎಂಬ ಶೀರ್ಷಿಕೆಯ ಅಡಿಯಲ್ಲಿ ಅಂಕಪಟ್ಟಿ ಹಾಗು ಪದವಿ ಪ್ರಮಾಣ ಪತ್ರ ನೀಡಲು ಅನುಮೋದಿಸಲಾಯಿತು.**

ಕುಲಸಚಿವರು ಕುಲಪತಿಗಳು

ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು

## ವಿಷಯ ಸಂಖ್ಯೆ: 19.03

**ವಿಷಯ: ಇತರೆ ಮುಕ್ತ ವಿಶ್ವವಿದ್ಯಾನಿಲಯಗಳ ಶೈಕ್ಷಣಿಕ ಕಾರ್ಯಕ್ರಮಗಳನ್ನು adopt/ adapt ಮಾಡಿಕೊಳ್ಳುವ ಬಗ್ಗೆ.**

****

National Assessment and Accreditation Council (NAAC) ರವರು ದೇಶದಲ್ಲಿ ಮುಕ್ತ ವಿಶ್ವವಿದ್ಯಾನಿಲಯಗಳಿಗೆ ಹೊಸದಾಗಿ NAAC Institutional Accreditation Manual ಅನ್ನು ಸಿದ್ಧಪಡಿಸಿ April, 2019 ರಂದು ಅಧಿಸೂಚನೆಗೊಳಿಸಲಾಗಿರುತ್ತದೆ.

ಸದರಿ Manual ನ Criterion I Curricular Aspects 1.2.1 (page no. 49) ರ ಪ್ರಕಾರ ಹಾಗು Academic Flexibility ಅಡಿಯಲ್ಲಿ ದೇಶದಲ್ಲಿನ ಇತರೆ ಮುಕ್ತ ವಿಶ್ವವಿದ್ಯಾನಿಲಯಗಳಲ್ಲಿ ಈಗಾಗಲೇ ಚಾಲ್ತಿಯಲ್ಲಿರುವ ವಿವಿಧ ಶಿಕ್ಷಣಕ್ರಮಗಳನ್ನು ಅಳವಡಿಸಿಕೊಂಡಿರುವ ಅಥವಾ ಅಳವಡಿಸಿಕೊಳ್ಳುವ ಅಂಶಕ್ಕೆ ಸಂಬಂಧಿಸಿದಂತೆ 10 weightage point ಗಳನ್ನು ನಿಗದಿಪಡಿಸಲಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ವಿ.ವಿ.ಗೆ ಯಾವುದೇ ಸಿದ್ಧಪಾತ ಬರಹಕ್ಕೆ ಸಂಬಂಧಿಸಿದಂತೆ ಆರ್ಥಿಕ ಹೊರೆ ಇಲ್ಲದೆ ವಿವಿಧ ಶಿಕ್ಷಣಕ್ರಮಗಳನ್ನು ಇತರೆ ಮುಕ್ತ ವಿ.ವಿ.ಗಳಿಂದ ವಿನಿಮಯ ಮಾಡಿಕೊಳ್ಳುವ ಬಗ್ಗೆ ಇಂಗಿತವನ್ನು ವ್ಯಕ್ತಪಡಿಸಿ ಈ ಕೆಳಕಂಡ 05 ಮುಕ್ತ ವಿಶ್ವವಿದ್ಯಾನಿಲಯಗಳಿಗೆ ಕುಲಸಚಿವರ ಮುಖೇನ ಪತ್ರ ರವಾನಿಸಲಾಗಿರುತ್ತದೆ.

1. Tamil Nadu Open University, Chennai – 600 015.
2. Yashwantrao Chavan Maharashtra Open University, Nashik – 422 222, Maharashtra.
3. Indira Gandhi National Open Unviersity, New Delhi – 110 068.
4. Dr. B.R. Ambedkar Open University, Telangana – 500 003.
5. Vardhaman Mahaveer Open University, Rajasthan – 324 021.

ಮೇಲಿನ 05 ಮುಕ್ತ ವಿಶ್ವವಿದ್ಯಾನಿಲಯಗಳಲ್ಲಿ Tamil Nadu Open University, Chennai ಇವರು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಚಾಲ್ತಿಯಲ್ಲಿರುವ Diploma in Journalism and Diploma in Nutrition and Health Education ಈ ಎರಡು ಶಿಕ್ಷಣಕ್ರಮಗಳನ್ನು ಅಳವಡಿಸಿಕೊಳ್ಳಲು ಆಸಕ್ತಿ ತೋರಿರುತ್ತಾರೆ.

ಈ ಹಿನ್ನೆಲೆಯಲ್ಲಿ ಇತರೆ ಮುಕ್ತ ವಿಶ್ವವಿದ್ಯಾನಿಲಯಗಳ ಶೈಕ್ಷಣಿಕ ಕಾರ್ಯಕ್ರಮಗಳನ್ನು ಕರಾಮುವಿಯಲ್ಲಿ adopt/ adapt ಅಳವಡಿಸಿಕೊಳ್ಳುವ ಸಂಬಂಧ ಶೈಕ್ಷಣಿಕ ಮಂಡಳಿ ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ವಿಷಯ ಮಂಡಿಸಿದೆ.

<u>ತೀರ್ಮಾನ</u> :

**ಇತರೆ ಮುಕ್ತ ವಿಶ್ವವಿದ್ಯಾನಿಲಯಗಳ ಶೈಕ್ಷಣಿಕ ಕಾರ್ಯಕ್ರಮಗಳನ್ನು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಯಾವುದೇ ಸಿದ್ಧಪಾತ ಬರಹಕ್ಕೆ ಸಂಬಂಧಿಸಿದಂತೆ ಆರ್ಥಿಕ ಹೊರೆಯಿಲ್ಲದೆ ಅಳವಡಿಸಿಕೊಳ್ಳಲು ಅನುಮೋದಿಸಲಾಯಿತು.**

## ವಿಷಯ ಸಂಖ್ಯೆ: 19.04

ವಿಷಯ : ವಿವಿಧ ಅಧ್ಯಯನ ವಿಭಾಗಗಳು ನಡೆಸುವ ಅಧ್ಯಯನ ಮಂಡಳಿ ಸಭೆಗೆ ಆಗಮಿಸುವ ವಿಶೇಷ ಆಹ್ವಾನಿತರಿಗೆ ಸಭಾ ಭತ್ಯೆ ಹಾಗು ಇತರೆ ಲಭ್ಯವಿರುವ ಭತ್ಯೆಗಳನ್ನು ಪಾವತಿ ಮಾಡುವ ಬಗ್ಗೆ.

****

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ II Statutes Determining the Constitution, Powers and Function of Board of Studies (I Ammendment 2021) ನ್ನು ಮಾನ್ಯ ಕುಲಾಧಿಪತಿಗಳಿಂದ ಅಂತಿಮಗೊಂಡಿದ್ದು 2 (10) ಅನುಸಾರ Board of Studies ಮುಖ್ಯಸ್ಥರು ವಿಶೇಷ ಪರಿಣಿತರನ್ನು ಆಹ್ವಾನಿಸಲು ಅವಕಾಶ ಮಾಡಿಕೊಡಲಾಗಿದೆ. ಪ್ರಸ್ತುತ, ಕರಾಮುವಿಯ ಕಚೇರಿ ಆದೇಶ ಸಂಖ್ಯೆ : ಕರಾಮುವಿ/ಡೀನ್(ಶೈ)/ಡಿಎಸಿ-05/2018-19, ದಿನಾಂಕ: 22-02-2019 ರ ಅನುಸಾರ ನಿಗದಿಪಡಿಸಲಾಗಿರುವ ದರಗಳಲ್ಲಿ ಕೇವಲ BOS ನ ಅಧ್ಯಯನ ಮಂಡಳಿ ಸದಸ್ಯರಿಗೆ ಮಾತ್ರವೇ ಸಭಾ ಭತ್ಯೆ, ದಿನ ಭತ್ಯೆ, ಪ್ರಯಾಣ ಭತ್ಯೆ ಹಾಗು ಸ್ಥಳೀಯ ಪ್ರಯಾಣ ಭತ್ಯೆಗಳನ್ನು ನೀಡಲು ಅವಕಾಶವಿದ್ದು ವಿಶೇಷ ಆಹ್ವಾನಿತರಾಗಿ ಆಗಮಿಸುವ ಪರಿಣಿತರಿಗೆ ಸಹ ಸದರಿ ಭತ್ಯೆಗಳನ್ನು ವಿಸ್ತರಿಸಲು ಕೋರಿ ವಿಷಯ ಮಂಡಿಸಲಾಯಿತು.

ತೀರ್ಮಾನ:

**ಅಧ್ಯಯನ ಮಂಡಳಿ ಸಭೆಯಲ್ಲಿ ಪಾಲ್ಗೊಳ್ಳುವ ಸದಸ್ಯರುಗಳಿಗೆ ಪ್ರಸ್ತುತ ನೀಡಲಾಗುತ್ತಿರುವ ಭತ್ಯೆಯನ್ನು ವಿಶೇಷ ಆಹ್ವಾನಿತರಿಗೂ ವಿಸ್ತರಿಸಲು ತೀರ್ಮಾನಿಸಲಾಯಿತು. ಅಂತೆಯೆ, ಮೌಲ್ಯಮಾಪನ, BOE ಸಭೆಗಳಿಗೆ ಆಗಮಿಸುವ ಸದಸ್ಯರಿಗೆ ಪ್ರಯಾಣ ಭತ್ಯೆ ಪ್ರತಿ ಕಿ.ಮೀ. ರೂ.6/- ಹಾಗು ಎಲ್ಲಾ ಸದಸ್ಯರಿಗೂ ಸಭಾ ಭತ್ಯೆ ರೂ.700/- ಗಳನ್ನು ನೀಡುತ್ತಿದ್ದು, ಈ ದರಗಳನ್ನು ವಿಶೇಷ ಆಹ್ವಾನಿತರನ್ನು ಒಳಗೊಂಡಂತೆ ಎಲ್ಲಾ ಅಧ್ಯಯನ ಮಂಡಳಿ ಸದಸ್ಯರಿಗೂ ನಿಯಮಾನುಸಾರ ಅನ್ವಯವಾಗುವಂತೆ ವಿಸ್ತರಿಸಲು ತೀರ್ಮಾನಿಸಲಾಯಿತು.**

ಕುಲಸಚಿವರು　　　　　　　　　　ಕುಲಪತಿಗಳು

## ವಿಷಯ ಸಂಖ್ಯೆ: 19.05

ವಿಷಯ : Diploma, Certificate (Non CBCS) ಕಾರ್ಯಕ್ರಮಗಳಿಗೆ ಸ್ವಯಂ ಕಲಿಕಾ ಸಾಮಾಗ್ರಿಗಳನ್ನು ಬರೆಸಲು ದರ ನಿಗದಿಗೊಳಿಸುವ ಕುರಿತು.

****

UGC 2017 ರ ನಿಯಮಾವಳಿ ಅನ್ವಯ ವಿಶ್ವವಿದ್ಯಾನಿಲಯದಲ್ಲಿ Choice Based Credit System (CBCS) ಹಾಗು Online Programmes ಗಳನ್ನು ಅಳವಡಿಸಿಕೊಂಡು ಹೊಸದಾಗಿ ಸ್ನಾತಕ/ ಸ್ನಾತಕೋತ್ತರ ಶಿಕ್ಷಣಕ್ರಮಗಳ ಅಧ್ಯಯನ ಸಾಮಗ್ರಿಗಳನ್ನು ರಚಿಸಲು ಪಠ್ಯ ಬರವಣಿಗೆ, ಸಂಪಾದನೆ, ಕರಡಚ್ಚು ತಿದ್ದುವಿಕೆ, ಭಾಷಾಂತರ ಮತ್ತು ಇತರ ವೆಚ್ಚಗಳ ಸಂಭಾವನೆಯನ್ನು ದಿನಾಂಕ : 21–03–2020 ರಂದು ನಡೆದ 54ನೇ ಶೈಕ್ಷಣಿಕ ಮಂಡಳಿ ಸಭೆ ಮತ್ತು ದಿನಾಂಕ : 30–05–2020 ರಂದು ನಡೆದ 160ನೇ ವ್ಯವಸ್ಥಾಪನಾ ಮಂಡಳಿಯ ಸಭೆಗಳಲ್ಲಿ ವಿಷಯವನ್ನು ಮಂಡಿಸಿ ಅನುಮೋದನೆ ಪಡೆದು, **ಕಚೇರಿ ಆದೇಶ ಸಂಖ್ಯೆ: ಕರಾಮುವಿ/ ಡೀನ್(ಶೈಕ್ಷಣಿಕ) /04ಅಧ್ಯಯನ ಸಾಮಗ್ರಿಗಳ ಸಂಭಾವನೆ/ 788/ 2020–2021, ದಿನಾಂಕ: 07–01–2021** ರಂದು ಹೊರಡಿಸಲಾಗಿರುತ್ತದೆ. ಆದರೆ Diploma, Certificate (Non CBCS) ಕಾರ್ಯಕ್ರಮಗಳ Lesson Writingಗೆ ಪ್ರತಿ Unit ಗೆ ಸಂಭಾವನೆ ದರ ನಿಗದಿಗೊಳಿಸಲಾಗಿರುವುದಿಲ್ಲ. ಸದರಿ ಶಿಕ್ಷಣಕ್ರಮಗಳ Lesson Writing ಗೆ ಸಂಭಾವನೆ ಧನದ ದರ ನಿಗದಿಗೊಳಿಸುವ ಸಂಬಂಧ ಶೈಕ್ಷಣಿಕ ಮಂಡಳಿಯ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ.

ತೀರ್ಮಾನ :

**Non CBCS ಕಾರ್ಯಕ್ರಮಗಳಿಗೂ ಈಗಾಗಲೇ ಜಾರಿಯಲ್ಲಿರುವ CBCS ಆದೇಶದಂತೆಯೇ ದರ ನಿಗದಿಗೊಳಿಸಲಾಯಿತು. ಆದಾಗ್ಯೂ, CBCS /Non CBCS Diploma, Certificate ಕಾರ್ಯಕ್ರಮಗಳಿಗೆ (ODL & Online) ಸ್ವಯಂ ಕಲಿಕಾ ಸಾಮಾಗ್ರಿಗಳನ್ನು ಬರೆಸಲು/ Edit ಮಾಡಲು ಮೇಲ್ಕಂಡ ಆದೇಶದಲ್ಲಿ ನಿಗದಿಯಾಗಿರವ ದರಕ್ಕಿಂತ ರೂ.500/– ಕಡಿಮೆ ನಿಗದಿಗೊಳಿಸಲು ತೀರ್ಮಾನಿಸಲಾಯಿತು.**

**ಕುಲಸಚಿವರು** **ಕುಲಪತಿಗಳು**

## ವಿಷಯ ಸಂಖ್ಯೆ: 19.06

ವಿಷಯ : ವಿಶ್ವವಿದ್ಯಾನಿಲಯದಲ್ಲಿ ಕಲಿಕಾರ್ಥಿ ಸಹಾಯ ಕೇಂದ್ರಗಳ ಮೂಲಕ ಹೊಸ **Skill Development** ಕಾರ್ಯಕ್ರಮಗಳನ್ನು ಆರಂಭಿಸುವ ಕುರಿತು.

****

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ಅನೇಕ **Skill Development** ಕಾರ್ಯಕ್ರಮಗಳನ್ನು ಆರಂಭಿಸಲು ಉದ್ದೇಶಿಸಿದೆ. ಅನೇಕ ಕಲಿಕಾರ್ಥಿ ಸಹಾಯ ಕೇಂದ್ರಗಳನ್ನು ಇಂತಹ ಕೆಲವು ಹೊಸ ವಿಷಯಗಳಲ್ಲಿ ವಿಶೇಷ ಪರಿಣಿತಿ ಹೊಂದಿದ್ದು ಅಂತಹ ಸಂಸ್ಥೆಗಳ ಮೂಲಕ ಉಪನ್ಯಾಸ ಹಾಗೂ ಪ್ರಾಯೋಗಿಕ ತರಗತಿಗಳನ್ನು ನೆಡಸಬಹುದಾಗಿದೆ. ಇಂತಹ ಅನೇಕ ಸಂಸ್ಥೆಗಳು ತಾವೇ ಪಠ್ಯಕ್ರಮ ರೂಪಿಸಿ, ಸಿದ್ದಪಾಠ ರಚಿಸಿ ಕರಾಮುವಿಯ ಅನುಮೋದನೆ ಕೋರಿರುತ್ತಾರೆ.
ಇವುಗಳ ವಿಷಯದಲ್ಲಿ ಕೆಳಗಿನ ಅಂಶಗಳನ್ನು ಅವಗಾಹನೆಗೆ ತರಲಾಗಿದೆ.

1. ಇಂತಹ ಸಂಸ್ಥೆಗಳು ಕರಾಮುವಿಯ ಕಲಿಕಾರ್ಥಿ ಸಹಾಯ ಕೇಂದ್ರಗಳಾಗಿರಬೇಕು.
2. ಇಂತಹ ಕೋರ್ಸ್‌ಗಳಿಗೆ ಕನಿಷ್ಠ ಪ್ರವೇಶಾತಿ ನಿಗದಿ ಪಡಿಸಬಹುದಾಗಿದೆ. ಇಂತಹ ಕನಿಷ್ಠ ಪ್ರವೇಶಾತಿ ಇಲ್ಲದ ಪಕ್ಷದಲ್ಲಿ ಆ ಆವೃತ್ತಿಯಲ್ಲಿ ಆ ಕೋರ್ಸ್ ಅನ್ನು ರದ್ದು ಪಡಿಸಬಹುದಾಗಿದೆ.
3. ಇಂತಹ ಸಂಸ್ಥೆಗಳಿಗೆ ಉಪನ್ಯಾಸ ಹಾಗೂ ಪ್ರಾಯೋಗಿಕ ತರಗತಿಗಳನ್ನು ನೆಡಸಲು ಪ್ರತಿ ವಿದ್ಯಾರ್ಥಿಗೆ ಇಂತಿಷ್ಟು ಹಣ ಎಂದು ನಿಗದಿಪಡಿಸಬಹುದಾಗಿದೆ.
4. ಇಂತಹ ಕಾರ್ಯಕ್ರಮಗಳನ್ನು ಕರಾಮುವಿ **Ordinance relating to Skill Development Programmes** ಅನುಸಾರ ನಡೆಸಬಹುದಾಗಿದೆ.
5. ಇಂತಹ ಪ್ರತಿ ಸಂಸ್ಥೆಗೆ ಕರಾಮುವಿ ವತಿಯಿಂದ ಒಬ್ಬ ನೋಡಲ್ ಅಧಿಕಾರಿಯನ್ನು ಸೂಕ್ತ ಸಮನ್ವಯಕ್ಕಾಗಿ ನೇಮಿಸಲು ತೀರ್ಮಾನಿಸಲಾಯಿತು.

ಸದರಿ ವಿಷಯದ ಕುರಿತು ಚರ್ಚೆ ಹಾಗು ಅನುಮೋದನೆಗಾಗಿ ವಿಷಯ ಮಂಡಿಸಿದೆ.

<u>ಚರ್ಚೆ</u> :

ಸದರಿ ವಿಷಯದಲ್ಲಿನ ಅಂಶಗಳನ್ನು ಗಮನಿಸಲಾಯಿತು. ಅನೇಕ ವಿಶೇಷ ಪರಿಣಿತಿ ಹೊಂದಿರುವ ಸಂಸ್ಥೆಗಳು ಇಂತಹ **Skill Development** ಕಾರ್ಯಕ್ರಮಗಳನ್ನು ನಡೆಸಲು ಆಸಕ್ತಿ ವಹಿಸಿರುವುದನ್ನು ಗಮನಿಸಲಾಯಿತು.

<u>ತೀರ್ಮಾನ</u> :

ಸದರಿ ವಿಷಯದಲ್ಲಿರುವ 5 ಅಂಶಗಳಿಗೂ ಅನುಮೋದನೆ ನೀಡಲಾಯಿತು. ಮುಂದುವರೆದು, ಕೆಳಕಂಡ ಅಂಶಗಳನ್ನು ಸಹ ಗಣನೆಗೆ ತೆಗೆದುಕೊಳ್ಳಲು ತೀರ್ಮಾನಿಸಲಾಯಿತು.

1) ಇಂತಹ **Skill Development** ಕಾರ್ಯಕ್ರಮಗಳಿಗೆ ಶುಲ್ಕ ನಿಗದಿಪಡಿಸಲು ಹಾಗು ಇಂತಹ ಸಂಸ್ಥೆಗಳಿಗೆ ಉಪನ್ಯಾಸ ಹಾಗೂ ಪ್ರಾಯೋಗಿಕ ತರಗತಿಗಳನ್ನು ನೆಡಸಲು ಪ್ರತಿ ವಿದ್ಯಾರ್ಥಿಗೆ ಇಂತಿಷ್ಟು ಹಣ ಎಂದು ನಿಗದಿಗೊಳಿಸಲು ಒಂದು **Monitoring Committee** ರಚಿಸಲು ತೀರ್ಮಾನಿಸಲಾಯಿತು. ಸದರಿ ಸಮಿತಿಯು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಎಲ್ಲಾ ಶಾಸನಬದ್ಧ ಅಧಿಕಾರಿಗಳು, ನೋಡಲ್ ಅಧಿಕಾರಿಗಳು (ಸಂಚಾಲಕರು), ಡೀನ್ (ಅಧ್ಯಯನ ಕೇಂದ್ರಗಳು) ಹಾಗು ಸಂಬಂಧಟ್ಟ ಸಂಸ್ಥೆಯ ಪ್ರತಿನಿಧಿ ಸದಸ್ಯರಾಗಿರಬೇಕು ಎಂದು ತೀರ್ಮಾನಿಸಲಾಯಿತು.

ಕುಲಸಚಿವರು — ಕುಲಪತಿಗಳು

2) ಇದಕ್ಕೆ ಸಂಬಂಧಿಸಿದಂತೆ, ದಿನಾಂಕ: 28-07-2021 ರಂದು ನಡೆದ ಸಭೆಯ ನಡಾವಳಿ ಅನುಸಾರ ಮಾರ್ಗಸೂಚಿಗಳನ್ನು ಅಳವಡಿಸಿಕೊಳ್ಳಲು ತೀರ್ಮಾನಿಸಲಾಯಿತು.
3) ಅಂತೆಯೇ, ಕರಾಮುವಿ ವತಿಯಿಂದಲೂ **Skill Development** ಕಾರ್ಯಕ್ರಮಗಳನ್ನು ನಡೆಸಲು ತೀರ್ಮಾನಿಸಲಾಯಿತು.

## ವಿಷಯ ಸಂಖ್ಯೆ: 19.07

**ವಿಷಯ : GB Diploma ಕಾರ್ಯಕ್ರಮಗಳನ್ನು PG Certificate ಕಾರ್ಯಕ್ರಮ ಎಂದು ಮರು ನಾಮಕರಣಗೊಳಿಸುವ ಬಗ್ಗೆ**

****

ದಿನಾಂಕ 04 September 2020 ರಿಂದ UGC ODL & OL Regulation ಜಾರಿಗೆ ಬಂದಿದ್ದು, ಅದರನ್ವಯ ಪಿಜಿ ಡಿಪ್ಲೊಮಾ ಕಾರ್ಯಕ್ರಮಗಳನ್ನು 2 ವರ್ಷ ಅವಧಿಯದ್ದಾಗಿರಬೇಕು ನೀಡಬೇಕು ಹಾಗು 80 ಕ್ರೆಡಿಟ್‌ಗಳು ಇರಬೇಕೆಂದು ತಿಳಿಸಲಾಗಿದೆ. ಆದರೆ, ಪ್ರಸ್ತುತ ಇದನ್ನು 2020-21 ಜನವರಿ ಸಾಲಿನಿಂದ GB Diploma ಕಾರ್ಯಕ್ರಮ ಎಂದು ಮರುನಾಮಕರಣಗೊಳಿಸಲಾಗಿತ್ತು. ಆದರೆ, GB Diploma ಕಾರ್ಯಕ್ರಮ ಎಂಬ ಶೀರ್ಷಿಕೆ ಪ್ರಚಲಿತವಾಗಿರದನ್ನು ಗಮನಿಸಿ. ಕರಾಮುವಿಯಲ್ಲಿ ಪ್ರಸ್ತುತ ಈ ಕಾರ್ಯಕ್ರಮಗಳನ್ನು PG Certificate ಕಾರ್ಯಕ್ರಮ ಎಂದು ಮರು ನಾಮಕರಣಗೊಳಿಸುವ ಬಗ್ಗೆ ಅನುಮೋದನೆ ಕೋರಿದೆ. ಶೈಕ್ಷಣಿಕ ಮಂಡಳಿಯ ಸಭೆಯ ಚರ್ಚೆ ಹಾಗು ನಿರ್ಣಯಕ್ಕಾಗಿ ವಿಷಯ ಮಂಡಿಸಿದೆ.

ತೀರ್ಮಾನ :

**GB Diploma ಕಾರ್ಯಕ್ರಮಗಳನ್ನು PG Certificate ಕಾರ್ಯಕ್ರಮ ಎಂದು ಮರು ನಾಮಕರಣಗೊಳಿಸುವ ಬಗ್ಗೆ ಅನುಮೋದಿಸಲಾಯಿತು.**

ಕುಲಸಚಿವರು

ಕುಲಪತಿಗಳು

ಅಂತಿಮವಾಗಿ 19ನೇ ವಿಶೇಷ ಶೈಕ್ಷಣಿಕ ಮಂಡಳಿ ಸಭೆಗೆ ಆಗಮಿಸಿ, ಮಂಡಿತ ವಿಷಯಗಳ ಬಗ್ಗೆ ಚರ್ಚಿಸಿ, ತಮ್ಮ ಅಮೂಲ್ಯ ಸಲಹೆ, ಸೂಚನೆಗಳನ್ನು ನೀಡಿ, ಸಭೆಯನ್ನು ಸುಸೂತ್ರವಾಗಿ ನಡೆಸಿಕೊಟ್ಟಿದ್ದಕ್ಕೆ ಎಲ್ಲಾ ಸದಸ್ಯರುಗಳಿಗೂ ಮಾನ್ಯ ಕುಲಪತಿಗಳು ಧನ್ಯವಾದಗಳನ್ನು ತಿಳಿಸುವುದರೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಕುಲಸಚಿವರು ಹಾಗು
ಸದಸ್ಯ ಕಾರ್ಯದರ್ಶಿಗಳು

ಕುಲಪತಿಗಳು ಹಾಗು ಅಧ್ಯಕ್ಷರು